ತಯಾರಿಸಲು ತನಿಖೆಯನ್ನು ಮುಂದುವರಿಸುತ್ತಿದ್ದೇವೆ ಎಂದು ಹೇಳಿದ್ದೀರಿ. ಇದು ಯಾವ ತನಿಖೆ? ಇದನ್ನು ಯಾವ ರೀತಿ ಮಾಡುತ್ತಿದ್ದೀರಿ? ಲಕ್ಷ್ಮೇಶ್ವರಕ್ಕೆ ಯಾವಾಗ ಕುಡಿಯುವ ನೀರನ್ನು ಕೊಡುತ್ತೀರೆಂಬುದನ್ನು ಸ್ಪಷ್ಟವಾಗಿ ಹೇಳಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಕೆ. ಜೆ. ಜಾರ್ಜ್:- ಮಾನ್ಯ ಅಧ್ಯಕ್ಷಣೆಯವರೇ, ಈಗಾಗಲೇ ಶಿರಹಟ್ಟಿ ತಾಲ್ಲೂಕು ಲಕ್ಷ್ಮೇಶ್ವರ ನಗರದಲ್ಲಿ ಕುಡಿಯುವ ನೀರಿನ ಅಭಾವ ಇರುವುದರಿಂದ ಅಲ್ಲಿ ಕೊಳವೆ ಬಾವಿಗಳನ್ನು ತೆಗೆಸುತ್ತಿದ್ದೇವೆ ಇದೂ ಅಲ್ಲದೆ ಖಾಯಂ ಆಗಿ ಇದಕ್ಕೆ ಒಂದು ಪರಿಹಾರವನ್ನು ಕಂಡುಹಿಡಿಯುವುದಕ್ಕೆ ವಾಟರ್ ಸ್ಕೀಂನ್ನು ೧೯೯೨-೯೩ರ ಸಾಲಿನಲ್ಲಿ ಸೇರಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಆದೇಶವನ್ನು ಕೊಟ್ಟಿದ್ದಾರೆ. ಇದರ ಪ್ರಕಾರ ಈಗಾಗಲೇ ಕೆ. ಯು. ಡಬ್ಲ್ಯು. ಎಸ್. ನವರಿಗೆ ಒಂದು ಎಸ್ಟಿಮೇಟ್ ಮಾಡಿ ಇದರಲ್ಲಿ ಸೇರಿಸುವುದಕ್ಕೆ ಆದೇಶ ಕೊಟ್ಟಿದ್ದೇವೆ.

ಶ್ರೀ ಎಸ್. ಎಸ್. ಪಾಟೀಲ:- ಜಾತಕ ಪಕ್ಷಿ ಮಳೆಗಾಗಿ ಕಾಯುವಂತೆ ಲಕ್ಷ್ಮೇಶ್ವರದ ಜನರು ಸರ್ಕಾರದಿಂದ ಕೊಡುವ ನೀರಿಗಾಗಿ ಕಾಯುತ್ತಿದ್ದಾರೆ. ಆದಷ್ಟು ಬೇಗ ಇದನ್ನು ಮುಗಿಸಿಕೊಡುತ್ತೀರಾ. ಈ ವರ್ಷವೇ ಈ ಕೆಲಸವನ್ನು ಪ್ರಾರಂಭ ಮಾಡುತ್ತೀರಾ?

ಶ್ರೀ ಕೆ. ಜೆ. ಜಾರ್ಜ್:- ಮಾಡುತ್ತೇವೆ. ಈಗಾಗಲೇ ನಾವು ಎಸ್ಟಿಮೇಟನ್ನು ಮಾಡುತ್ತಿದ್ದೇವೆ. ಎಸ್ಟಿಮೇಟ್ ಮಾಡಿದ ಮೇಲೆ ಅದಕ್ಕೆ ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್ ಕೊಟ್ಟು ಕೆಲಸವನ್ನು ಪ್ರಾರಂಭ ಮಾಡಿ ಆದಷ್ಟು ಬೇಗ ಮುಗಿಸಬೇಕಾಗುತ್ತದೆ. ಬಹುಶಃ ಈ ವರ್ಷ ಇದು ಆಗುವುದಿಲ್ಲ. ಇದನ್ನು ಸಂಪೂರ್ಣವಾಗಿ ಮಾಡಬೇಕಾದರೆ ೨-೩ ವರ್ಷ ಆಗಬಹುದು.

ಮಳೆಯ ನೀರನ್ನು ಒಳಚರಂಡಿಗೆ ಸೇರಿಸುವ ಬಗ್ಗೆ

೧೪೬೦. ಡಾ|| ಎ. ಬಿ. ಮಲಕರೆಡ್ಡಿ (ಯಾದಗಿರಿ):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧) ಮಳೆಯ ನೀರು ಮತ್ತು ಕೊಳಚೆ ನೀರು ಸೇರುವುದನ್ನು ತಡೆಗಟ್ಟಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಬೆಂಗಳೂರು ಜಲಮಂಡಳಿ ವಿಫಲವಾಗಿದೆ ಎಂಬುದು ನಿಜವೆ?

೨) ಇದು ನಿಜವಾದಲ್ಲಿ, ಯಾವುದಾದರೂ ನಿದರ್ಶನಗಳು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಥವಾ ಬೆಂಗಳೂರು ಜಲಮಂಡಳಿಯ ಗಮನಕ್ಕೆ ತಂದಿರುತ್ತಾರೆಯೇ?

೩) ಇಂತಹ ಸಂದರ್ಭಗಳಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):-

೧) ಇಲ್ಲ. ಬೆಂಗಳೂರು ಜಲಮಂಡಳಿಯು ಒಳಚರಂಡಿ ವ್ಯವಸ್ಥೆಯು ಕೊಳಚೆ ನೀರನ್ನು ಪ್ರತ್ಯೇಕವಾಗಿ ಸಾಗಿಸುವ ಕ್ರಮವನ್ನು ಒಳಗೊಂಡಿದೆ. ಮಳೆಯ ನೀರು ಹರಿಯುವ ಚರಂಡಿಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಿರ್ವಹಿಸುತ್ತದೆ.

ಎಸ್. ಟಿ. ಬಿಡ್. ಬಡಾವಣೆಯಲ್ಲಿ ಮಳೆ ನೀರಿನ ಚರಂಡಿಯಿದ್ದು, ಇದಕ್ಕೆ ಅಕ್ಕಪಕ್ಕದಲ್ಲಿರುವಂತೆ ರಿವಿನ್ಯೂ ಬಡಾವಣೆಯವರು ಮತ್ತು ಖಾಸಗಿ ಬಡಾವಣೆಯವರು ತಮ್ಮ ಮನೆಗಳ ಕೊಳಚೆ ನೀರನ್ನು

ಈ ಮಳೆ ನೀರಿನ ಚರಂಡಿಗೆ ಬಿಟ್ಟಿರುತ್ತಾರೆ.

೨) ಹೌದು.

೩) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಈಗಾಗಲೇ ಅಧ್ಯಕ್ಷರು, ಬೆಂಗಳೂರು ಜಲಮಂಡಳಿ ಮತ್ತು ಆಯುಕ್ತರು, ಬೆಂಗಳೂರು ಮಹಾನಗರಪಾಲಿಕೆಯವರನ್ನು ಮಳೆಯ ನೀರನ್ನು ಒಳಚರಂಡಿಯ ಕೊಳಚೆ ನೀರಿಗೆ ಸೇರದಂತೆ ಪ್ರತಿಬಂಧಕ ಕ್ರಮವನ್ನು ತೆಗೆದುಕೊಳ್ಳುವಂತೆ ಸೂಚನೆ ನೀಡಲಾಗಿದೆ.

ಡಾ: ಎ. ಬಿ. ಮಲಕರೆಡ್ಡಿ:- ಮಾನ್ಯ ಅಧ್ಯಕ್ಷರೇ, ಈ ಬೆಂಗಳೂರು ಒಳಚರಂಡಿ ಮಂಡಳಿಯವರು ಅನೇಕ ಕಾಲೋನಿಗಳಲ್ಲಿ ಸ್ಯೂವರೇಜ್ ಸಿಸ್ಟಮ್ ಕನೆಕ್ಷನ್ ಸರಿಯಾಗಿ ಮಾಡಿಕೊಟ್ಟಿಲ್ಲ. ಮತ್ತು ಕೆಲವು ಕಡೆ ಒಳಚರಂಡಿ ನೀರು ಸರಾಗವಾಗಿ ಹೋಗಲು ಯಾವ ವ್ಯವಸ್ಥೆಯನ್ನೂ ಮಾಡಿಲ್ಲ. ನಿರ್ದಿಷ್ಟವಾದ ಒಂದು ಉದಾಹರಣೆಯನ್ನು ಹೇಳುವುದಾದರೆ ರಾಮಯ್ಯ ಮೆಡಿಕಲ್ ಕಾಲೇಜ್ ಏನಿದೆ, ಅದರ ಸುತ್ತಮುತ್ತಲ ಪ್ರದೇಶದಲ್ಲಿ ಮಳೆ ಬಿದ್ದ ನೀರು ಒಳಚರಂಡಿಯ ಮೂಲಕ ಹೋಗದಂತೆ ಮಾಡದೇ ಇರುವುದರಿಂದ ಅಲ್ಲಿಯ ವಾತಾವರಣ ಕಲುಷಿತವಾಗಿದೆ. ಇದು ಒಂದನೆಯದು; ಎರಡನೆಯದಾಗಿ, ಮಳೆಗಾಲದಲ್ಲಿ ರೈನ್ ವಾಟರ್ ಜೊತೆ ಒಳಚರಂಡಿಯ ನೀರು ಹೋಗಿ ವಾಟರ್ ಸಪ್ಲೈ ಕೂಡ ಕಂಟಾಮಿನೇಟ್ ಆಗುತ್ತಿದೆ. ಹೀಗಾಗಿ ಈ ಎರಡು ದೃಷ್ಟಿಯಿಂದ ಅಲ್ಲಿಯ ಜನರಿಗೆ ತೊಂದರೆಯಾಗಿದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೋ ಇಲ್ಲವೋ ಎಂದು ಇಲ್ಲಿ ಕೇಳಿರುವುದಕ್ಕೆ ಇಲ್ಲವೆಂದು ಹೇಳಿದ್ದೀರಿ. ಇದು ಸತ್ಯಕ್ಕೆ ದೂರವಾದುದು.

ಶ್ರೀ ಕೆ. ಜೆ. ಜಾರ್ಜ್:- ಮಾನ್ಯ ಅಧ್ಯಕ್ಷಣೆಯವರೇ, ಅಲ್ಲಿ ಏನಾಗಿದೆಯೆಂದರೆ ಕೆಲವು ಅನ್‌ಆಥರೈಸ್ಡ್ ಲೇಔಟ್ ಆಗಿದ್ದು, ಅಲ್ಲಿ ಸಾಕಷ್ಟು ಮನೆಗಳು ಬಂದಿವೆ. ನಮ್ಮ ಲೇಔಟ್‌ಗಳಲ್ಲಿ ಅಥವಾ ಕಾರ್ಪೋರೇಷನ್ ಏರಿಯಾಗಳಲ್ಲಿ ನಾವು ಸ್ಯೂವರೇಜ್ ವಾಟರ್ ಮತ್ತು ರೈನ್ ವಾಟರ್‌ನ್ನು, ಅದು ಎಲ್ಲಿಂದಲೇ ಬರಲಿ ಅದನ್ನು ಸೆಪರೇಟ್ ಆಗಿ ತೆಗೆದುಕೊಂಡು ಹೋಗುತ್ತಿದ್ದೇವೆ. ಅನ್‌ಆಥರೈಸ್ಡ್ ಲೇಔಟ್‌ಗಳಲ್ಲಿ ಸುಮಾರು ಒಂದು ಲಕ್ಷ, ಒಂದೂವರೆ ಲಕ್ಷ ಮನೆಗಳು ಈಗ ಬಂದಿರಬಹುದು. ಅಂಥ ಲೇಔಟ್‌ಗಳು ಬಂದಿರುವುದರಿಂದ ಈಗಾಗಲೇ ನಾವು ಅವುಗಳ ಬಗ್ಗೆ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಇವುಗಳನ್ನು ರೆಗ್ಯುಲರೈಸ್ ಮಾಡಿದ ಮೇಲೆ ಬಹುಶಃ ಅಲ್ಲಿ ಡ್ರೈನೇಜ್ ವ್ಯವಸ್ಥೆ ಮಾಡಿಕೊಡಬಹುದು. ತಾವು ಹೇಳಿದ ರಾಮಯ್ಯ ಮೆಡಿಕಲ್ ಕಾಲೇಜ್ ಪಕ್ಕದಲ್ಲಿ ಬಿ. ಇ. ಎಲ್. ಸೊಸೈಟಿಗೆ ಸೇರಿದಂಥ ಮನೆಗಳಿವೆ. ನಾನು ಅದನ್ನು ವೆರಿಫೈ ಮಾಡಿ ಅಲ್ಲಿಗೆ ಏನು ಕೆಲಸ ಆಗಬೇಕಾಗಿದೆಯೋ ಅದನ್ನು ತೆಗೆದುಕೊಳ್ಳಲಿಕ್ಕೆ ಆದೇಶ ಕೊಡುತ್ತೇನೆ.

ರಾಜ್ಯದಲ್ಲಿ ಪ್ರಶಸ್ತಿ ಪಡೆದ ವ್ಯಕ್ತಿಗಳಿಗೆ ಸರ್ಕಾರದಿಂದ ಉಚಿತ ನಿವೇಶನದ ಬಗ್ಗೆ

೧೧೨೪. ಶ್ರೀಮತಿ ಪೋಟಮ್ಮ (ಮೂಡಿಗೆರೆ):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯದಲ್ಲಿ ಸಾಹಿತ್ಯ, ಕ್ರೀಡೆ ಮತ್ತು ವಿವಿಧ ರಂಗದಲ್ಲಿ ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿ ಪಡೆದಂತಹ ವ್ಯಕ್ತಿಗಳಿಗೆ ಸರ್ಕಾರದಿಂದ ಉಚಿತ ನಿವೇಶನ ಕೊಡಬೇಕೆಂದು ಸರ್ಕಾರ ಯಾವಾಗ ತೀರ್ಮಾನಿಸಿತು?